# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2013–14ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಲಾದಂತೆ, 1000 ಕುಡಿಯುವ ನೀರಿನ ಶುದ್ಧೀಕರಣ ಘಟಕಗಳನ್ನು ಸಮಸ್ಯಾತ್ಮಕ ಗ್ರಾಮೀಣ ಜನವಸತಿಗಳಲ್ಲಿ ಅಳವಡಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:
1. SLSSC ನಡವಳಿಗಳ ದಿನಾಂಕ:28.06.2013.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ರವರ ಪ್ರಸ್ತಾವನೆ ಸಂಖ್ಯೆ:ಮುಇಂ/ಪಂರಾಇಂಇ/ತ್ವಗ್ರಾನೀಸ–1/ತಾಂಸ–1/ಸಇಂ–3/2013–14, ದಿನಾಂಕ:02.08.2013.
3. ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪ 86 ಗ್ರಾನೀಸ(5)2013, ದಿನಾಂಕ:03.08.2013.
4. ಸಚಿವ ಸಂಪುಟದ ನಿರ್ಣಯ ಸಂಖ್ಯೆ:609/2013, ದಿನಾಂಕ:20.09.2013.

## ಪ್ರಸ್ತಾವನೆ

2013–14ನೇ ಸಾಲಿನ ಆಯವ್ಯಯ ಘೋಷಣೆಯನ್ವಯ, ರಾಜ್ಯದ ಗ್ರಾಮೀಣ ಜನವಸತಿಗಳಲ್ಲಿ ಆರ್ಸೆನಿಕ್, ಅಧಿಕ ಫ್ಲೋರೈಡ್ ಹಾಗೂ ಮತ್ತಿತರ ರಾಸಾಯನಿಕ ಕಲುಷಿತೆಗಳಿಂದ ಕುಡಿಯುವ ನೀರಿನ ಗುಣಮಟ್ಟದ ಸಮಸ್ಯೆಗೊಳಗಾಗಿರುವ ಜನವಸತಿಗಳಲ್ಲಿ ಭೂಮಿಯ ಮೇಲ್ಮೈ ಜಲಮೂಲ ಆಧರಿಸಿ ಶುದ್ಧ ಕುಡಿಯುವ ನೀರಿನ ಶಾಶ್ವತ ವ್ಯವಸ್ಥೆ ಮಾಡಲು, ಆರೋಗ್ಯಕ್ಕೆ ಹಾನಿಕಾರಕ ಸೂಕ್ಷ್ಮಾಣು ಜೀವಿಗಳು, ನೈಟ್ರೇಟ್, ಟಿಡಿಎಸ್, ಗಡಸು ಸವಳು ನೀರು, ಅಧಿಕ ಕಬ್ಬಿಣಾಂಶ ಇವುಗಳನ್ನು ತೊಡೆದು ಹಾಕುವಂತಹ ಅಧುನಿಕ ತಂತ್ರಜ್ಞಾನವನ್ನು ಅಳವಡಿಸಬೇಕಾಗಿರುತ್ತದೆ. ಈ ಸಲುವಾಗಿ ಮೇಲೆ ಓದಲಾದ ಪ್ರಸ್ತಾವನೆ/ ನಿರ್ಣಯಗಳನ್ವಯ ಹಾಗೂ ತಜ್ಞ ಸಂಸ್ಥೆಗಳ ತಾಂತ್ರಿಕ ಸಲಹೆ ಹಾಗೂ State Level Scheme Sanctioning Committee (SLSSC) ನಿರ್ಣಯದನ್ವಯ, ಪ್ರಚಲಿತದಲ್ಲಿರುವ Reverse Osmosis ತಂತ್ರಜ್ಞಾನದ ನೀರು ಶುದ್ಧೀಕರಣ ಘಟಕಗಳನ್ನು 2013–14ನೇ ಸಾಲಿನಲ್ಲಿ, ರಾಜ್ಯದ ಆಯ್ದ ಜಿಲ್ಲೆಗಳ 1000 ಜನವಸತಿಗಳಲ್ಲಿ ವಿವಿಧ ಸಾಮರ್ಥ್ಯದ 1000 ನೀರು ಶುದ್ಧೀಕರಣ ಘಟಕಗಳನ್ನು ಈಗಾಗಲೇ ಅನುಮೋದಿಸಿರುವ ಟೆಂಡರ್ (ToR) ನಿಬಂಧನೆಗಳನ್ವಯ ಅರ್ಹ/ಅನುಮೋದಿತ ಸಂಸ್ಥೆಗಳ ಮುಖೇನ O&M ಜವಾಬ್ದಾರಿಯೊಂದಿಗೆ ಅಳವಡಿಸಲು ಕ್ರಮವಹಿಸಬೇಕಾಗಿದೆ.

ಅಂತೆಯೇ 1000 ಶುದ್ಧೀಕರಣ ಘಟಕಗಳ ಸಂರಕ್ಷಣಾ ಕೊಠಡಿ ನಿರ್ಮಾಣದ ಜವಾಬ್ದಾರಿಯನ್ನು ಕರ್ನಾಟಕ ಗ್ರಾಮೀಣ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ನಿಗಮದ (KRIDL) ಮೂಲಕ ಗರಿಷ್ಠ ಮಿತವ್ಯಯ ಅಳವಡಿಸಿ ಅನುಮೋದಿತ ಮಾದರಿಯನ್ವಯ ಮುಖ್ಯ ಇಂಜಿನಿಯರ್, ಪಿಆರ್ಇಡಿ ರವರು ನೀಡುವ ಮಾದರಿಯಂತೆ ಸ್ಥಳೀಯ PRI/EE ಸಮನ್ವಯದಲ್ಲಿ ನಿರ್ಮಾಣ ಮಾಡಲು ಆಢಳಿತಾತ್ಮಕ ಅನುಮೋದನೆ ನೀಡಲು ಆರ್ಥಿಕ ಇಲಾಖೆಯ ಸಹಮತಿ ಪಡೆದಿದೆ. ಆದುದರಿಂದ ಈ ಆದೇಶ

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 86 ಗ್ರಾನೀಸ(5)2013(ಭಾ–1), ಬೆಂಗಳೂರು ದಿನಾಂಕ 22.10.2013**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, 2013–14ನೇ ಸಾಲಿನಲ್ಲಿ ರಾಜ್ಯದ ಗ್ರಾಮೀಣ ಜನವಸತಿಗಳಲ್ಲಿ ಆರ್ಸೆನಿಕ್, ಅಧಿಕ ಫ್ಲೋರೈಡ್ ಹಾಗೂ ಮತ್ತಿತರ ರಾಸಾಯನಿಕ ಕಲುಷಿತೆಗಳಿಂದ ಕುಡಿಯುವ ನೀರಿನ ಗುಣಮಟ್ಟದ ಸಮಸ್ಯೆಗೊಳಗಾಗಿರುವ (ಒಂದಕ್ಕಿಂತ ಹೆಚ್ಚಿನ ರಾಸಾಯನಿಕ ಕಲುಷಿತೆಗೊಂಡಿರುವ) ಜನವಸತಿಗಳಲ್ಲಿ ಪ್ರಚಲಿತದಲ್ಲಿರುವ Reverse Osmosis ತಂತ್ರಜ್ಞಾನದ ವಿವಿಧ ಸಾಮರ್ಥ್ಯದ 1000 ನೀರು ಶುದ್ಧೀಕರಣ ಘಟಕಗಳನ್ನು ಗ್ರಾಮಗಳಲ್ಲಿ ಕುಡಿಯುವ ನೀರಿನ ಗುಣಮಟ್ಟದ ಸಮಸ್ಯೆಗೊಳಗಾಗಿರುವ (ಜಿಲ್ಲೆಗಳಲ್ಲಿ ಆಯ್ಕೆಯಾಗಿರುವ ಗ್ರಾಮಗಳ ಪಟ್ಟಿ ಲಗತ್ತಿಸಿದೆ) ಜನವಸತಿಗಳಲ್ಲಿ ಅಳವಡಿಸುವ ಸಂಬಂಧ ಆಡಳಿತಾತ್ಮಕ ಅನುಮೋದನೆ ನೀಡಲು ಸರ್ಕಾರವು ಹರ್ಷಿಸುತ್ತದೆ.

2. ಈ 1000 ನೀರು ಶುದ್ಧೀಕರಣ ಘಟಕಗಳ ಅಳವಡಿಕೆ ಹಾಗೂ ಅವುಗಳ 7 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (O&M) ಜವಾಬ್ದಾರಿಯನ್ನು KTPP ಕಾಯ್ದೆಯಡಿ ಅನುಮೋದಿತ

ToR ರಂತೆ ಆಯ್ಕೆಯಾದ ಸಂಸ್ಥೆಗಳ ಮುಖೇನ ಮಾಡಿಸತಕ್ಕದ್ದು. ಸದರಿ 1000 ಜನವಸತಿಗಳ ಪರಿಷ್ಕೃತ ಪಟ್ಟಿಗೆ ಸರ್ಕಾರದ ಅನುಮೋದನೆ ಪಡೆಯಬೇಕು ಹಾಗೂ ಆಯ್ಕೆಯಾದ ಸಂಸ್ಥೆ ಈಗಾಗಲೇ ನಿರ್ಣಯವಾಗಿರುವಂತೆ, MGIRD, ಬೆಂಗಳೂರಿನಲ್ಲಿ ಸದರಿ ನೀರು ಶುದ್ಧೀಕರಣ ಘಟಕದ ಮಾದರಿಯನ್ನು ಸ್ಥಾಪಿಸಿ, ಅದರ ಕಾರ್ಯಕ್ಷಮತೆಯನ್ನು ರುಜುವಾತುಪಡಿಸಬೇಕು.

3. ಈ ಸಲುವಾಗಿ ಜಿಲ್ಲಾವಾರು 1000 ನೀರು ಶುದ್ಧೀಕರಣ ಘಟಕಗಳ ಸ್ಥಾಪನೆಗಾಗಿ ಅಗತ್ಯವಿರುವ ಸಂರಕ್ಷಣಾ ಕೊಠಡಿಗಳ ನಿರ್ಮಾಣದ ಜವಾಬ್ದಾರಿಯನ್ನು, ಕರ್ನಾಟಕ ಗ್ರಾಮೀಣ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ನಿಗಮ(KRIDL)ದ ಮೂಲಕ ಗರಿಷ್ಠ ಮಿತವ್ಯಯ ಅಳವಡಿಸಿ CE, PREDರವರು ನೀಡುವ ಅನುಮೋದಿತ ಗದಗ ಮಾದರಿಯನ್ವಯ ಸ್ಥಳೀಯ ಅವಶ್ಯಕತೆ ಆಧರಿಸಿ PRED ಮತ್ತು ಗ್ರಾಮ ಪಂಚಾಯತ್ ಸಮನ್ವಯದಲ್ಲಿ ನಿರ್ಮಾಣ ಮಾಡಿಸತಕ್ಕದ್ದು. ಸದರಿ ಘಟಕಗಳ ವಿದ್ಯುದ್ಧೀಕರಣ ಸಲುವಾಗಿ ESCOMಗಳ ಸಹಯೋಗದಲ್ಲಿ ತಕ್ಷಣ ಮುಂಜಾಗ್ರತಾ ಕ್ರಮವಹಿಸಬೇಕು.

4. ಮೇಲ್ಕಂಡ ಬಾಬ್ತಿನ ವೆಚ್ಚವನ್ನು 2013-14ರ ಸಾಲಿನ NRDWP (C&Q)ಯಡಿ ಭರಿಸತಕ್ಕದ್ದು. ಹಾಗೂ IMISನಲ್ಲಿ ಆರ್ಥಿಕ ಮತ್ತು ಭೌತಿಕ ಪ್ರಗತಿ ದಾಖಲಿಸುವುದು.

5. ಈ ಆದೇಶವನ್ನು ಆರ್ಥಿಕ ಇಲಾಖೆಯ ಸಹಮತಿ ಸಂಖ್ಯೆ: ಆಇ 349 ವೆಚ್ಚ-6/2013 ದಿನಾಂಕ 16.09.2013 ರನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಾಮಕೃಷ್ಣ)
ಸರ್ಕಾರದ ಉಪಕಾರ್ಯದರ್ಶಿ(ಗ್ರಾನೀಸ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ದೂ:080-2203 2806, ಫ್ಯಾಕ್ಸ್ 2220 3175
ಇ-ಮೇಲ್ rk3452000@gmail.com

**ಗೆ:**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ, ಬೆಳಗಾಂ, ಬಿಜಾಪುರ, ಬೆಂಗಳೂರು(ನಗರ) ಚಿಕ್ಕಬಳ್ಳಾಪುರ, ಬಳ್ಳಾರಿ, ಕೊಪ್ಪಳ, ಗದಗ, ಗುಲ್ಬರ್ಗಾ, ಬೀದರ್, ಚಿಕ್ಕಮಗಳೂರು, ಹಾಸನ, ದಾವಣಗೆರೆ, ಚಿತ್ರದುರ್ಗ, ಕೋಲಾರ, ರಾಯಚೂರು, ತುಮಕೂರು ಮತ್ತು ಮಂಡ್ಯ.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಕೊಳಚೆ ನಿರ್ಮೂಲನಾ ಮಂಡಳಿ ಸಂಕೀರ್ಣ, ನಂ:55, 4ನೇ ಮಹಡಿ, ಅಭಯ ಕಾಂಪ್ಲೆಕ್ಸ್, ರಿಜಲ್ದಾರ್ ರಸ್ತೆ, ಶೇಷಾದ್ರಿ ಪುರಂ, ಬೆಂಗಳೂರು.
3. ರಾಜ್ಯದ ಎಲ್ಲಾ(8)ಅಧೀಕ್ಷಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತಗಳು.
4. ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಾಗಲಕೋಟೆ, ಬೆಳಗಾಂ, ಬಿಜಾಪುರ, ಬೆಂಗಳೂರು(ನಗರ) ಚಿಕ್ಕಬಳ್ಳಾಪುರ, ಬಳ್ಳಾರಿ, ಕೊಪ್ಪಳ, ಗದಗ, ಗುಲ್ಬರ್ಗಾ, ಬೀದರ್, ಚಿಕ್ಕಮಗಳೂರು, ಹಾಸನ, ದಾವಣಗೆರೆ, ಚಿತ್ರದುರ್ಗ, ಕೋಲಾರ, ರಾಯಚೂರು, ತುಮಕೂರು ಮತ್ತು ಮಂಡ್ಯ.
5. ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ, ಬೆಳಗಾಂ, ಬಿಜಾಪುರ, ಬೆಂಗಳೂರು(ನಗರ) ಚಿಕ್ಕಬಳ್ಳಾಪುರ, ಬಳ್ಳಾರಿ, ಕೊಪ್ಪಳ, ಗದಗ, ಗುಲ್ಬರ್ಗಾ, ಬೀದರ್, ಚಿಕ್ಕಮಗಳೂರು, ಹಾಸನ, ದಾವಣಗೆರೆ, ಚಿತ್ರದುರ್ಗ, ಕೋಲಾರ, ರಾಯಚೂರು, ತುಮಕೂರು ಮತ್ತು ಮಂಡ್ಯ.
6. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿ.

**ಪ್ರತಿ:**

1. ಮಾನ್ಯ ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
4. ಇಲಾಖೆಯ ಎಲ್ಲಾ ನಿರ್ದೇಶಕರು/ಆಂತರಿಕ ಆರ್ಥಿಕ ಸಲಹೆಗಾರರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು(ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.
6. ನಿರ್ದೇಶಕರು(SWSM) ಹಾಗೂ ಸರ್ಕಾರದ ಅಪರ ಕಾರ್ಯದರ್ಶಿಗಳ ಆಪ್ತ ಸಹಾಯಕರು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.